For More Job News Visit : www.kscvaani.com

ಕರ್ನಾಟಕ ಸರ್ಕಾರ
ಕರ್ನಾಟಕ ಪರೀಕ್ಷಾ ಪ್ರಾಧಿಕಾರ
ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 012. ದೂರವಾಣಿ: 080-23 460 460 (5 ಲೈನ್‌ಗಳು)
ಫ್ಯಾಕ್ಸ್: 080-23461576 ಇ-ಮೇಲ್: keauthority-ka@nic.in ವೆಬ್‌ಸೈಟ್: http://kea.kar.nic.in

ಸಂಖ್ಯೆ : ಇಡಿ/ಕೆಇಎ/ಆಡಳಿತ/ಪಿ.ಆರ್.19/2020-21 ದಿನಾಂಕ: 15-02-2022

ಅಧಿಸೂಚನೆ

ಕರ್ನಾಟಕದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇಮಕಾತಿ

"ಕರ್ನಾಟಕ ಶಿಕ್ಷಣ ಇಲಾಖಾ ಸೇವೆಗಳು (ಕಾಲೇಜು ಶಿಕ್ಷಣ ಇಲಾಖೆ) (ಸಹಾಯಕ ಪ್ರಾಧ್ಯಾಪಕರ ನೇಮಕಾತಿ) (ವಿಶೇಷ) ನಿಯಮಗಳು 2020" ಅನ್ವಯ, ಕರ್ನಾಟಕದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ **1242** ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಹುದ್ದೆಗೆ ಈಗಾಗಲೆ ಆನ್‌ಲೈನ್ ಮೂಲಕ ಯಶಸ್ವಿಯಾಗಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ನೇಮಕಾತಿಯ ಮುಂದಿನ ಪ್ರಕ್ರಿಯೆಗಳಿಗೆ ಅರ್ಹತೆಯನ್ನು ಪಡೆಯಲು ಕಡ್ಡಾಯವಾಗಿ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗಬೇಕಾಗುತ್ತದೆ.

ಸ್ಪರ್ಧಾತ್ಮಕ ಪರೀಕ್ಷೆಯ ವಿಷಯಗಳನ್ನು ವಿಂಗಡಿಸಿ ಪ್ರಾಧಿಕಾರವು ದಿನಾಂಕ 01-02-2022 ರಂದು ಪ್ರಕಟಿಸಲಾದ ವೇಳಾಪಟ್ಟಿಗೆ ಅಭ್ಯರ್ಥಿಗಳು ಸಲ್ಲಿಸಿದ ಆಕ್ಷೇಪಣೆಗಳನ್ನು ಪರಿಗಣಿಸಿ, ಅಂತಿಮ ವೇಳಾಪಟ್ಟಿಯನ್ನು ಸಿದ್ಧಪಡಿಸಿದ್ದು, ಈ ಕೆಳಗೆ ನೀಡಿರುವ ವೇಳಾಪಟ್ಟಿಯಂತೆ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಲಾಗುವುದು. ಅರ್ಹ ಅಭ್ಯರ್ಥಿಗಳು **ದಿನಾಂಕ 28-02-2022ರ** ನಂತರ ಪ್ರಾಧಿಕಾರದ ವೆಬ್‌ಸೈಟ್ **http://kea.kar.nic.in** ನಿಂದ ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಂಡು ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗಬಹುದು.

ಸ್ಪರ್ಧಾತ್ಮಕ ಪರೀಕ್ಷೆಯ ವೇಳಾಪಟ್ಟಿ

ದಿನಾಂಕ / ದಿನ	ಸಮಯ / ಅವಧಿ	ವಿಷಯ/ಗಳು
12-03-2022 ಶನಿವಾರ	ಮ. 2.30ರಿಂದ ಸಂ. 4.30 (2 ಗಂಟೆಗಳು)	ಕಡ್ಡಾಯ ಪತ್ರಿಕೆ - 3 (ಸಾಮಾನ್ಯ ಜ್ಞಾನ) 50 ಅಂಕಗಳು
13-03-2022 ಭಾನುವಾರ	ಬೆ. 10.30 ರಿಂದ ಮ. 12.30 (2 ಗಂಟೆಗಳು)	ಕಡ್ಡಾಯ ಪತ್ರಿಕೆ - 1 (ಕನ್ನಡ) 100 ಅಂಕಗಳು
	ಮ. 2.30ರಿಂದ ಸಂ. 4.30 (2 ಗಂಟೆಗಳು)	ಕಡ್ಡಾಯ ಪತ್ರಿಕೆ - 2 (ಇಂಗ್ಲೀಷ್) 100 ಅಂಕಗಳು

ಐಚ್ಛಿಕ ವಿಷಯಗಳು : ಪ್ರತಿ ಪತ್ರಿಕೆಗೆ - 250 ಅಂಕಗಳು

14-03-2022 ಸೋಮವಾರ	ಬೆ. 10.00 ರಿಂದ ಮ. 1.00 (3 ಗಂಟೆಗಳು)	1. ಕನ್ನಡ	4. ಉರ್ದು	22. ಸಸ್ಯ ಶಾಸ್ತ್ರ
		12. ಭೂಗೋಳ ಶಾಸ್ತ್ರ	26. ಫ್ಯಾಷನ್ ಟೆಕ್ನಾಲಜಿ	
	ಮ. 2.00 ರಿಂದ ಸಂ. 5.00 (3 ಗಂಟೆಗಳು)	7. ರಾಜ್ಯಶಾಸ್ತ್ರ	20. ಸೂಕ್ಷ್ಮ ಜೀವಶಾಸ್ತ್ರ	13. ಭೂಗರ್ಭ ಶಾಸ್ತ್ರ
15-03-2022 ಮಂಗಳವಾರ	ಬೆ. 10.00 ರಿಂದ ಮ. 1.00 (3 ಗಂಟೆಗಳು)	5. ಇತಿಹಾಸ	14. ವಾಣಿಜ್ಯ ಶಾಸ್ತ್ರ	19. ಗಣಿತ ಶಾಸ್ತ್ರ
		21. ಪ್ರಾಣಿಶಾಸ್ತ್ರ		
	ಮ. 2.00 ರಿಂದ ಸಂ. 5.00 (3 ಗಂಟೆಗಳು)	6. ಅರ್ಥಶಾಸ್ತ್ರ	16. ಭೌತಶಾಸ್ತ್ರ	17. ರಸಾಯನ ಶಾಸ್ತ್ರ
		2. English	11. ಸಮಾಜ ಕಾರ್ಯ	
16-03-2022 ಬುಧವಾರ	ಬೆ. 10.00 ರಿಂದ ಮ. 1.00 (3 ಗಂಟೆಗಳು)	9. ಶಿಕ್ಷಣ ಶಾಸ್ತ್ರ	3. ಹಿಂದಿ	24. ಗಣಕ ವಿಜ್ಞಾನ
		10. ಕಾನೂನು	25. ಸಂಖ್ಯಾ ಶಾಸ್ತ್ರ	
	ಮ. 2.00 ರಿಂದ ಸಂ. 5.00 (3 ಗಂಟೆಗಳು)	15. ನಿರ್ವಹಣಾ ಶಾಸ್ತ್ರ	18. ಜೈವಿಕ ರಸಾಯನ ಶಾಸ್ತ್ರ	23. ಎಲೆಕ್ಟ್ರಾನಿಕ್ಸ್
		8. ಸಮಾಜ ಶಾಸ್ತ್ರ		

ಸೂಚನೆ: ಕೇವಲ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗುವುದರಿಂದ ನೇಮಕಾತಿಗಾಗಿ ಅಭ್ಯರ್ಥಿಗಳು ಯಾವುದೇ ಹಕ್ಕನ್ನು ಪಡೆಯುವುದಿಲ್ಲ; ನೇಮಕಾತಿ ಪ್ರಕ್ರಿಯೆಯು ಚಾಲ್ತಿಯಲ್ಲಿರುವ ನೇಮಕಾತಿ ನಿಯಮಗಳಲ್ಲಿನ ಷರತ್ತುಗಳನ್ನು ಪೂರೈಸುವುದು ಮತ್ತು ಗೌರವಾನ್ವಿತ ನ್ಯಾಯಾಲಯಗಳ / ಸರ್ಕಾರದ ನಿರ್ಧಾರಕ್ಕೆ ಒಳಪಟ್ಟಿರುತ್ತದೆ.

ಸಹಿ/-
(ಎಸ್. ರಮ್ಯ ಭಾ.ಆ.ಸೇ),
ಕಾರ್ಯನಿರ್ವಾಹಕ ನಿರ್ದೇಶಕರು.

ವಾಸಾಸಂಇ/ಬೆಂ.ಸ/ಜಿಎ/3392/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.





